All India Radio: Bangalore
National Bulletin In Kannada
24.11.2025  07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

1. ಮಾನವೀಯತೆ, ಸಮಾನತೆ ಮತ್ತು ಜಾಗತಿಕ ಸಹಕಾರ ಕೇಂದ್ರೀಕೃತ ಮಾದರಿ ಅಳವಡಿಕೆಗೆ ಜಿ-೨೦ ರಾಷ್ಟ್ರಗಳಿಗೆ ಪ್ರಧಾನಿ ಕರೆ
2. ಸುಪ್ರೀಂಕೋರ್ಟ್‌ನ ೫೩ನೇ ಮುಖ್ಯ ನ್ಯಾಯಮೂರ್ತಿಗಳಾಗಿ ಇಂದು ನ್ಯಾಯಮೂರ್ತಿ ಸೂರ್ಯಕಾಂತ್ ಪ್ರಮಾಣವಚನ
3. ಹರಿಯಾಣದಲ್ಲಿ ಅಂತಾರಾಷ್ಟ್ರೀಯ ಗೀತಾಮಹೋತ್ಸವದಲ್ಲಿಂದು ಹರಿಯಾಣ ಮಂಟಪ ಉದ್ಘಾಟಿಸಲಿರುವ ಸಚಿವ  ರಾಜನಾಥ್ ಸಿಂಗ್
4. ಡೆಫ್ಲಿಂಪಿಕ್ಸ್ ಶೂಟಿಂಗ್ ; ೨೫ ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಅಭಿನವ್ ದೇಶ್ವಾಲ್‌ಗೆ ಚಿನ್ನದ ಪದಕ

<><><><>

ಲಾಭ ಆಧಾರಿತ ನಾವೀನ್ಯತಾ ಮಾದರಿಗೆ ಬದಲಾಗಿ ಮಾನವೀಯತೆ, ಸಮಾನತೆ ಮತ್ತು ಜಾಗತಿಕ ಸಹಕಾರದ ಮೇಲೆ ಕೇಂದ್ರೀಕರಿಸುವ ಮಾದರಿಯ ಅಳವಡಿಕೆಗೆ ಜಿ-೨೦ ರಾಷ್ಟ್ರಗಳಿಗೆ ಪ್ರಧಾನಿ ನರೇಂದ್ರ ಮೋದಿಯವರು ಕರೆ ನೀಡಿದ್ದಾರೆ. ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ ಜಿ-೨೦ ನಾಯಕರ ಶೃಂಗಸಭೆಯಲ್ಲಿ ಮೂರನೇ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, ತಂತ್ರಜ್ಞಾನವು ಮಾನವ ಕೇಂದ್ರಿತ, ಜಾಗತಿಕ ಮತ್ತು ಮುಕ್ತ ಮೂಲವಾಗಿರಬೇಕು. ಭಾರತದ ಡಿಜಿಟಲ್ ಪರಿಸರ ವ್ಯವಸ್ಥೆಯು ಈ ದೃಷ್ಟಿಕೋನವನ್ನು ಅನುಸರಿಸುತ್ತದೆ, ಡಿಜಿಟಲ್ ಪಾವತಿಗಳಲ್ಲಿ ದೇಶವು ಜಗತ್ತನ್ನು ಮುನ್ನಡೆಸಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು. ಎಲ್ಲರಿಗೂ ಕಲ್ಯಾಣ ಮತ್ತು ಸಂತೋಷ ಎಂಬ ವಿಷಯದ ಮೇಲೆ ಭಾರತವು ಫೆಬ್ರವರಿ ೨೦೨೬ ರಲ್ಲಿ ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಆಯೋಜಿಸಲಿದೆ ಎಂದು ಪ್ರಧಾನಿ ಮೋದಿ ಘೋಷಿಸಿದರು ಮತ್ತು ಎಲ್ಲಾ ಜಿ೨೦ ರಾಷ್ಟ್ರಗಳನ್ನು ಭಾಗವಹಿಸಲು ಆಹ್ವಾನಿಸಿದರು. ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ ಭಾರತ-ಬ್ರೆಜಿಲ್-ದಕ್ಷಿಣ ಆಫ್ರಿಕಾ ನಾಯಕರ ಸಭೆಯಲ್ಲಿ ಮಾತನಾಡಿದ ಪ್ರಧಾನಿ, ಇದು ಕೇವಲ ಮೂರು ರಾಷ್ಟ್ರಗಳ

ಗುಂಪಲ್ಲ, ಇವು ಮೂರು ಖಂಡಗಳು, ಮೂರು ಪ್ರಮುಖ ಪ್ರಜಾಪ್ರಭುತ್ವಗಳು ಮತ್ತು ಮೂರು ಪ್ರಮುಖ ಆರ್ಥಿಕತೆಗಳನ್ನು ಸಂಪರ್ಕಿಸುವ ಪ್ರಮುಖ ವೇದಿಕೆಯಾಗಿದೆ ಎಂದು ಹೇಳಿದರು. ಈ ನಡುವೆ ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ ೧೨ ನೇ ಜಿ-೨೦ ನಾಯಕರ ಶೃಂಗಸಭೆ ನಿನ್ನೆ ಸಂಜೆ ಸಂಪನ್ನಗೊಂಡಿತು. ಈ ವರ್ಷದ ಶೃಂಗಸಭೆಯ ಧ್ಯೇಯವಾಕ್ಯ - "ಸೌಹಾರ್ದತೆ, ಸಮಾನತೆ ಮತ್ತು ಸುಸ್ಥಿರತೆ ಎಂಬುದಾಗಿತ್ತು.

<><><><>

ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ ಜಿ-೨೦ ಶೃಂಗಸಭೆಯ ನೇಪಥ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಅವರೊಂದಿಗೆ ಸಭೆ ನಡೆಸಿದರು. ಮುಂಬರುವ ತಿಂಗಳುಗಳಲ್ಲಿ, ವಿಶೇಷವಾಗಿ ವ್ಯಾಪಾರ, ಹೂಡಿಕೆ, ತಂತ್ರಜ್ಞಾನ ಮತ್ತು ನಾವೀನ್ಯತೆ, ಇಂಧನ ಮತ್ತು ಶಿಕ್ಷಣದಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಹೆಚ್ಚಿಸಲು ಇಬ್ಬರೂ ನಾಯಕರು ಒಪ್ಪಿಕೊಂಡರು. ೨೦೩೦ ರ ವೇಳೆಗೆ ದ್ವಿಪಕ್ಷೀಯ ವ್ಯಾಪಾರವನ್ನು ೫೦ ಶತಕೋಟಿ ಡಾಲರ್‌ಗಳಿಗೆ ದ್ವಿಪಕ್ಷೀಯ ವ್ಯಾಪಾರವನ್ನು ದ್ವಿಗುಣಗೊಳಿಸುವ ಗುರಿಯನ್ನು ಹೊಂದಿರುವ ಅತ್ಯಂತ ಮಹತ್ವಾಕಾಂಕ್ಷೆಯ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ ಕುರಿತು ಮಾತುಕತೆಗಳನ್ನು ಪ್ರಾರಂಭಿಸಲು ಇಬ್ಬರು ನಾಯಕರು ಸಹಮತ ವ್ಯಕ್ತಪಡಿಸಿದರು. ಪ್ರಧಾನಿ ನರೇಂದ್ರ ಮೋದಿಯವರು ಇಟಲಿ ಪ್ರಧಾನಿ, ಜಾರ್ಜಿಯಾ ಮೆಲೋನಿ ಅವರನ್ನು ಭೇಟಿಯಾದರು. ವ್ಯಾಪಾರ, ಹೂಡಿಕೆ, ರಕ್ಷಣೆ, ನಾವೀನ್ಯತೆ, ಎಐ, ಬಾಹ್ಯಾಕಾಶ ಮತ್ತು ಶಿಕ್ಷಣದಾದ್ಯಂತ ಸಂಬಂಧಗಳನ್ನು ಗಾಢಗೊಳಿಸುವ ಕುರಿತು ಅವರು ಉತ್ಪಾದಕ ಚರ್ಚೆ ನಡೆಸಿದರು. ಭಯೋತ್ಪಾದನೆಗೆ ಹಣಕಾಸು ಒದಗಿಸುವುದರ ವಿರುದ್ಧ ಸಹಕಾರವನ್ನು ಹೆಚ್ಚಿಸಲು ಮತ್ತು ಜಾಗತಿಕ ಭದ್ರತೆಗೆ ಹಂಚಿಕೆಯ ಬದ್ಧತೆಯನ್ನು ಬಲಪಡಿಸಲು ಜಂಟಿ ಉಪಕ್ರಮವನ್ನು ಇಬ್ಬರೂ ನಾಯಕರು ಘೋಷಿಸಿದರು.

<><><><>

ಸುಪ್ರೀಂಕೋರ್ಟ್‌ನ ೫೩ನೇ ಮುಖ್ಯ ನ್ಯಾಯಮೂರ್ತಿಗಳಾಗಿ ಇಂದು ನ್ಯಾಯಮೂರ್ತಿ ಸೂರ್ಯಕಾಂತ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಸೂರ್ಯಕಾಂತ್ ಅವರಿಗೆ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಮಾಣವಚನ ಬೋಧಿಸಲಿದ್ದಾರೆ. ನಿನ್ನೆ ಸಂಜೆ ನಿವೃತ್ತರಾದ ನ್ಯಾಯಮೂರ್ತಿ ಬಿ ಆರ್ ಗವಾಯಿ ಅವರ ನಂತರ ಅಧಿಕಾರ

ವಹಿಸಿಕೊಳ್ಳಲಿದ್ದಾರೆ. ನ್ಯಾಯಮೂರ್ತಿ ಕಾಂತ್ ಅವರನ್ನು ಅಕ್ಟೋಬರ್ ೩೦ ರಂದು ಮುಂದಿನ ಸಿಜೆಐ ಆಗಿ ನೇಮಿಸಲಾಯಿತು. ೨೦೨೭ರ ಫೆಬ್ರವರಿ ೯ರಂದು ೬೫ ವರ್ಷ ವಯಸ್ಸನ್ನು ಪೂರೈಸಿದ ನಂತರ ಅವರು ನಿವೃತ್ತಿ ಹೊಂದಲಿದ್ದಾರೆ.

<><><>

ಹರಿಯಾಣದ ಕುರುಕ್ಷೇತ್ರದಲ್ಲಿ ಇಂದು ನಡೆಯಲಿರುವ ಅಂತಾರಾಷ್ಟ್ರೀಯ ಗೀತಾಮಹೋತ್ಸವದಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹರಿಯಾಣ ಮಂಟಪವನ್ನು ಉದ್ಘಾಟಿಸಲಿದ್ದಾರೆ. ಕುರುಕ್ಷೇತ್ರ ವಿಶ್ವವಿದ್ಯಾಲಯವು ದ್ರೌಪದಿ ಕೂಪ್ ಪ್ರದೇಶದಲ್ಲಿ ಹರಿಯಾಣ ಮಂಟಪವನ್ನು ಸ್ಥಾಪಿಸಿದೆ. ಈ ಮಂಟಪದಲ್ಲಿ ಯುವ ಕಲಾವಿದರು, ಹರಿಯಾಣದ ಜಾನಪದ ಕಲೆ ಮತ್ತು ಸಂಸ್ಕೃತಿಯನ್ನು ಪ್ರದರ್ಶಿಸಲಿದ್ದಾರೆ.

<><><>

ಭಾರತೀಯ ನೌಕಾಪಡೆಯು ಇಂದು ಮುಂಬೈನ ನೌಕಾ ಡಾಕ್‌ಯಾರ್ಡ್‌ನಲ್ಲಿ ಮಾಹೆ ವರ್ಗದ ಮೊದಲ ಜಲಂತರ್ಗಾಮಿ ವಿರೋಧಿ ನೌಕೆಯನ್ನು ಭಾರತೀಯ ನೌಕಾಪಡೆಗೆ ನಿಯೋಜಿಸಲಿದೆ. ಈ ನೌಕೆಯು ಪಶ್ಚಿಮ ಸಮುದ್ರ ತೀರದಲ್ಲಿ ಕಾರ್ಯ ನಿರ್ವಹಿಸಲಿದೆ. ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಈ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಸಮಾರಂಭವನ್ನು ಪಶ್ಚಿಮ ನೌಕಾ ಕಮಾಂಡ್‌ನ ಫ್ಲಾಗ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಆಯೋಜಿಸಲಿದ್ದಾರೆ.

<><><>

ಅಯೋಧ್ಯೆಯಲ್ಲಿ ನಾಳೆ ನಡೆಯಲಿರುವ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಲಿದ್ದಾರೆ. ಶ್ರೀರಾಮ ಜನ್ಮಭೂಮಿ ದೇವಾಲಯದ ಕಟ್ಟಡ ಕಾಮಗಾರಿಗಳೆಲ್ಲ ಪೂರ್ಣಗೊಂಡ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗಾಗಲೇ ವೇದಾಚಾರ್ಯರುಗಳು ವೇದಘೋಷಗಳೊಂದಿಗೆ ವೈದಿಕ ಪದ್ಧತಿಯಂತೆ ಗಣಪತಿ ಪೂಜೆ, ಪಂಚಾಂಗ ಪೂಜೆ, ಷೋಡೊಷ ಮಾತೃಕಾ ಪೂಜೆ ಮತ್ತು ವಾಸ್ತು ಹಾಗೂ ನವಗ್ರಹ ಪೂಜೆಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಅಯೋಧ್ಯೆ ನಗರದಲ್ಲಿ ಭವ್ಯ ರೋಡ್‌ಶೋ ನಡೆಸಲಿದ್ದಾರೆ.

<><><><>

ಇಂದು ಸಿಖ್‌ರ ೯ನೇ ಗುರುಗಳಾಗಿದ್ದ ಗುರು ತೇಗ್ ಬಹದ್ದೂರ್ ಅವರ ೩೫೦ನೇ ಹುತಾತ್ಮ ದಿನವನ್ನು ಸ್ಮರಿಸಲಾಗುತ್ತಿದೆ. ಮೊಘಲರ ದೊರೆ ಔರಂಗಜೇಬನ ಆದೇಶದಂತೆ ಇವರನ್ನು ಕೊಲ್ಲಲಾಯಿತು. ಈ ದಿನವನ್ನು ಶಹೀದಿ ದಿವಸ್ ಎಂದು ಕರೆಯಲಾಗುತ್ತದೆ. ಇವರು ಗುರು ನಾನಕರ ಬೋಧನೆಗಳನ್ನು ದೇಶಾದ್ಯಂತ ಪಸರಿಸಿದರು. ಹಾಗೆಯೇ ೧೧೬ ಶಬದ್‌ಗಳನ್ನು ೧೫ ರಾಗಗಳಲ್ಲಿ ಸಂಯೋಜಿಸಿದರು. ಇವುಗಳಲ್ಲಿ ಆದಿಗ್ರಂಥ್ ಸಹ ಸೇರಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಗುರು ತೇಗ್ ಬಹದ್ದೂರ್ ಅವರ ಹುತಾತ್ಮರ ದಿನದಂದು ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ. ಇವರ ಬೋಧನೆಗಳು ಸತ್ಯ, ನಿಷ್ಠೆ, ಪ್ರಾಮಾಣಿಕತೆಯನ್ನು ಎತ್ತಿ ಹಿಡಿಯುತ್ತದೆ. ಇವರ ತ್ಯಾಗ, ಬಲಿದಾನ, ಸದಾ ನಂಬಿಕೆಯ ಸ್ವಾತಂತ್ರ್ಯ ಮತ್ತು ಬಹುತ್ವವನ್ನು ಜನರಲ್ಲಿ ಬಿತ್ತಲು ಪ್ರೇರೇಪಣೆಯಾಗಿದೆ ಎಂದಿದ್ದಾರೆ.

<><><><>

ಜಮ್ಮು-ಕಾಶ್ಮೀರದಲ್ಲಿ ಸುಣ್ಣದ ಕಲ್ಲುಗಳ ಖನಿಜ ಬ್ಲಾಕ್‌ಗಳ ಮೊದಲ ಹಂತದ ಹರಾಜನ್ನು ಇಂದು ಜಮ್ಮುವಿನಲ್ಲಿ ಔಪಚಾರಿಕವಾಗಿ ಆರಂಭಿಸಲಾಗುವುದು. ಈ ಕಾರ್ಯಕ್ರಮದ ನೇತೃತ್ವವನ್ನು ಕೇಂದ್ರ ಕಲ್ಲಿದ್ದಲು ಸಚಿವ ಜಿ. ಕಿಶನ್ ರೆಡ್ಡಿ ವಹಿಸಲಿದ್ದಾರೆ. ಈ ಪ್ರಕ್ರಿಯೆಯು ಕೇಂದ್ರ ಮತ್ತು ರಾಜ್ಯದ ನಡುವಿನ ಬಲವಾದ ಪಾಲುದಾರಿಕೆ ಹಾಗೂ ಉಪಕ್ರಮದ ಕಾರ್ಯತಂತ್ರದ ಮಹತ್ವವನ್ನು ಇದು ಪ್ರತಿಬಿಂಬಿಸುತ್ತದೆ ಎಂದು ಗಣಿ ಸಚಿವಾಲಯ ತಿಳಿಸಿದೆ. ಅನಂತ್‌ನಾಗ್, ರಾಜೌರಿ ಮತ್ತು ಪೂಂಚ್ ಜಿಲ್ಲೆಗಳಲ್ಲಿ ಸುಮಾರು ೩೧೪ ಹೆಕ್ಟೇರ್‌ಗಳಷ್ಟು ಪ್ರದೇಶದಲ್ಲಿ ಒಟ್ಟು ೭ ಸುಣ್ಣದ ಕಲ್ಲು ನಿಕ್ಷೇಪಗಳನ್ನು ಗುರುತಿಸಲಾಗಿದೆ.

<><><><>

ನಿನ್ನೆ ಟೋಕಿಯೊದಲ್ಲಿ ಡೆಫ್ಲಿಂಪಿಕ್ಸ್ ಭಾಗವಾಗಿ ನಡೆದ ೨೫ ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಅಭಿನವ್ ದೇಶ್ವಾಲ್ ಅವರು ಅರ್ಹತಾ ಪಂದ್ಯದಲ್ಲಿ ದಾಖಲೆಯೊಂದಿಗೆ ಚಿನ್ನ ಗೆದ್ದುಕೊಂಡರು. ಫೈನಲ್‌ನಲ್ಲಿ ಅವರು ೪೪ ಅಂಕಗಳನ್ನು ಗಳಿಸುವ ಮೂಲಕ ದಕ್ಷಿಣ ಕೊರಿಯಾದ ಸೆಯುಂಗ್ ಹ್ವಾ ಲೀ ಅವರನ್ನು ಸೋಲಿಸಿದರು. ಉಕ್ರೇನ್‌ನ ಸೆರ್ಹಿ ಫಾರ್ಮಿನ್ ಕಂಚಿನ ಪದಕ ಗೆದ್ದರು, ಮತ್ತೊಬ್ಬ ಭಾರತೀಯ ಶೂಟರ್ ಚೇತನ್ ಹನ್ಮಂತ್ ಸಪ್ಕಲ್ ಐದನೇ ಸ್ಥಾನ ಪಡೆದರು.

<><><><>

ಗುವಾಹಟಿಯ ಬರ್ಸಪಾರಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ-ದಕ್ಷಿಣ ಆಫ್ರಿಕಾ ಎರಡನೇ ಮತ್ತು ಅಂತಿಮ ಟೆಸ್ಟ್‌ನ ಎರಡನೇ ದಿನದಾಟದ ಅಂತ್ಯಕ್ಕೆ ಭಾರತ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೬.೧ ಓವರ್‌ಗಳಲ್ಲಿ ೯ ರನ್ ಗಳಿಸಿದೆ. ಬೆಳಗ್ಗೆ ೯ ಗಂಟೆಗೆ ಆರಂಭವಾಗಲಿರುವ ೩ನೇ ದಿನದಾಟದಲ್ಲಿ ಭಾರತ ತನ್ನ ಮೊದಲ ಇನ್ನಿಂಗ್ಸ್ ಅನ್ನು ಮುಂದುವರಿಸಲಿದೆ.  ಎರಡನೇ ದಿನದಾಟದಲ್ಲಿ ದಕ್ಷಿಣ ಆಫ್ರಿಕಾ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೪೮೯ ರನ್ ಗಳಿಸಿತು. ದಕ್ಷಿಣ ಆಫ್ರಿಕಾ ಪರ ಸೇನುರಾನ್ ಮುತ್ತುಸಾಮಿ ೧೦೯ ರನ್‌ಗಳನ್ನು ಗಳಿಸಿದ್ದು, ಮಾರ್ಕೋ ಯಾನ್ಸನ್ ೯೩ ರನ್‌ಗಳ ಭರ್ಜರಿ ಆಟವಾಡಿ ತಂಡಕ್ಕೆ ಉತ್ತಮ ಮೊತ್ತ ಗಳಿಸಿಕೊಟ್ಟರು. ಭಾರತದ ಪರ ಕುಲ್‌ದೀಪ್ ಯಾದವ್ ೪ ವಿಕೆಟ್‌ಗಳನ್ನು ಕಬಳಿಸಿದರೆ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ ಮತ್ತು ರವೀಂದ್ರ ಜಡೇಜಾ ತಲಾ ೨ ವಿಕೆಟ್‌ಗಳನ್ನು ಗಳಿಸಿದರು.

<><><><>

ಶ್ರೀಲಂಕಾದ ಕೊಲಂಬೊದಲ್ಲಿ ನಡೆದ ಟಿ-೨೦ ಮಹಿಳಾ ಅಂಧರ ವಿಶ್ವಕಪ್ ಕ್ರಿಕೆಟ್‌ನ ಚೊಚ್ಚಲ ಆವೃತ್ತಿಯ ಚಾಂಪಿಯನ್ ಆಗಿ ಭಾರತ ಮಹಿಳೆಯರ ತಂಡ ಹೊರ ಹೊಮ್ಮಿದೆ. ನಿನ್ನೆ ನಡೆದ ಫೈನಲ್ ಪಂದ್ಯದಲ್ಲಿ ನೇಪಾಳ ವಿರುದ್ಧ ೭ ವಿಕೆಟ್‌ಗಳ ಭರ್ಜರಿ ಜಯ ಗಳಿಸುವ ಮೂಲಕ ಭಾರತ ತಂಡ ಇತಿಹಾಸ ಸೃಷ್ಟಿಸಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನೇಪಾಳ ೫ ವಿಕೆಟ್ ನಷ್ಟಕ್ಕೆ ೧೧೪ ರನ್ ಗಳಿಸಲಷ್ಟೇ ಶಕ್ತವಾಯಿತು. ೧೧೫ ರನ್‌ಗಳ ಗುರಿ ಬೆನ್ನತ್ತಿದ ಭಾರತ ೪೭ ಎಸೆತಗಳು ಬಾಕಿ ಇರುವಾಗಲೇ ಗುರಿ ತಲುಪಿ ಜಯ ತನ್ನದಾಗಿಸಿಕೊಂಡಿತು. ಭಾರತದ ಪರ ಖುಲಾ ಶರೀರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>